ಇರುತ್ತೆ, ಇದೇ ಮನೆ, ಅದೇ ಹೇಮಾ, ಅದೇ ಫ್ಯಾಕ್ಟ್ರಿ... ಇದೇ ನಾನು, ನಾನು ಈಗಿರೋ ಹಾಗೆ ಇರ್ತೀನಿ. ನಿಮ್ಮಿಬ್ಬರ ಸುದ್ದಿಗೆ ಬರಲ್ಲ. ನಂಗೇನಪ್ಪ ಅಂದ್ರೆ ಮನೆ ಅಚ್ಚುಕಟ್ಟಾಗಿ ನಡೀಬೇಕು. ಅಷ್ಟು ಕಷ್ಟಪಟ್ಟು ಅಪ್ಪ ಕಟ್ಟಿರುವ ಫ್ಯಾಕ್ಟರಿ ಸರ್‍ಯಾಗಿ ನೋಡ್ಕೋಬೇಕು. ಅದೆಲ್ಲ ನೀವಿಬ್ರು ನೋಡ್ಕೋತೀರ ಅಂತ ನಂಗೊತ್ತು. ನಂಗೆ ಯಾವ ಜವಾಬ್ದಾರಿನೂ ಬೇಕಿಲ್ಲ ಖಂಡಿತ. ಟ್ರಸ್ಟ್ ಮಿ' ಅಂದಳು.

'ಎರಡು ಮದ್ವೆ ಮಾಡ್ಕೋಳಕ್ಕೆ ನಾನು ರೆಡಿ ಇಲ್ಲ. ಹೇಮಾನೂ ಇದಕ್ಕೆಲ್ಲ ಒಪ್ಪಲ್ಲ' ಅಂದೆ. 'ಹೇಮಾ ಪರವಾಗಿ ನೀವ್ಯಾಕೆ ಮಾತಾಡ್ತಿರಾ? ಅವಳಿಗೆ ಎಲ್ಲಾ ಹೇಳಿ ಒಪ್ಪಿಸಿದ್ದೀನಿ. ಅವಳು ನನ್ನನ್ನು ಅರ್ಥಮಾಡ್ಕೊಂಡು ಇದಕ್ಕೆಲ್ಲಾ ಒಪ್ಪಿದ್ದಾಳಲ್ಲ' ಅಂದಳು. ನಾನು ಅಚ್ಚರಿಯಿಂದ ಹೇಮಾಳ ಮುಖ ನೋಡಿದೆ. ಅವಳು ಖಚಿತವಾಗಿ, 'ನೀವೇನು ಅನುಮಾನಿಸಬೇಡಿ ಭಾವ, ನಮ್ಮಿಬ್ರನ್ನೂ ಮಾಡ್ಕೊಳ್ಳಿ; ಲೋಕ ಕಾಣ್ವಾಂಗೆ ಅವಳಿಗೆ ತಾಳಿಕಟ್ಟಿ, ಗುಟ್ಟಾಗಿ ನಂಗೆ. ಇದು ನಮ್ಮ ಮಧ್ಯದ ಮಾತು. ಯಾರಿಗೂ ಗೊತ್ತಾಗಬೇಕಿಲ್ಲ. ಅಕ್ಕ ಪಾಪ... ನಾವಿಬ್ರು ಕೈ ಬಿಟ್ರೆ ಏನ್‌ಮಾಡ್ಬೇಕು ಹೇಳಿ? ನಾವು ನಾವು ಹೊಂದಿಕೊಂಡರೆ ಸರಿ ಅಲ್ವ? ನೀವು ಧೈರ್ಯವಾಗಿ ಒಪ್ಪಿಕೊಳ್ಳಿ. ಅಕ್ಕ ಹೇಳಿದ್ದು ಸರಿಯಾಗೇ ಇದೆ' ಅಂದಳು. 'ಓ... ನೀವಿಬ್ಬರೂ ಮಾತಾಡಿ ಈ ತೀರ್ಮಾನಕ್ಕೆ ಬಂದಿದೀರ! ನಂಗೆ ಈಗ ಹೇಳ್ತಿದೀರ' ಅಂದೆ ವಿಷಾದದಿಂದ. 'ಅದೆಲ್ಲ ಏನು ಇಲ್ಲ ಭಾವ. ಅಕ್ಕನ ಸ್ಥಿತಿ ನಂಗೆ ಮೊದಲಿಂದಲೂ ಗೊತ್ತಲ್ಲ... ನೀವಾವತ್ತು ಜಗಳಾ ಮಾಡಿಕೊಂಡು ಹೋದಮೇಲೆ ನಾನು ಅಕ್ಕ ಕೂತ್ಕೊಂಡು ಮಾತಾಡಿದ್ವಿ. ಅಕ್ಕಾನೆ ಇದನ್ನೂ ಹೇಳಿದ್ದು. ಆಮೇಲೆ ನಂಗೂ ಇದೇ ಸರಿ ಅಂತ ಅನ್ನಿಸ್ತು. ಯಾಕಾಗಬಾರದು ಭಾವ? ನಾನಂತೂ ಈ ಮನೆ ಬಿಟ್ಟು ಎಲ್ಲೂ ಬರಲ್ಲ. ನೀವು ಒಪ್ಪಿದರೆ ನಮ್ಮೆಲ್ಲರ ಸಮಸ್ಯೆ ಬಗೆ ಹರಿಯುತ್ತೆ' ಅಂದಳು.

ಎಂಗೇಜ್‌ಮೆಂಟ್ ಮಾಡಿಕೊಂಡು ಮೂರು ವರ್ಷವಾಯ್ತು. ಲವ್‌ಮ್ಯಾರೇಜ್ ಬೇಗ ಆಗುತ್ತೆ ಅಂದುಕೊಂಡಿದ್ವಿ. ಅಂತೂ ಮದುವೆ ಊಟ ಹಾಕಿಸಕ್ಕೆ ಇಷ್ಟು ಕಾಯಿಸಿದ್ರಲ್ಲ ಅಂತ ಎಲ್ಲರೂ ತಮಾಷೆ ಮಾಡಿದರು. ಅದ್ದೂರಿಯಾಗಿ ರೆಸಾರ್ಟ್ ಒಂದರಲ್ಲಿ ನನ್ನ ನಂದನಾರೆಡ್ಡಿಯ ಮದುವೆ ನಡೆಯಿತು. ಎಲ್ಲಾ ಜವಾಬ್ದಾರಿ ಹೇಮಾಳದ್ದೆ.

ನಮ್ಮದು ಪ್ರೇಮ ವಿವಾಹ.

ಮದುವೆಯಾಗಿ ಒಂದು ವಾರದ ಮೇಲೆ ನಾನು ಹೇಮಾ ಶ್ರೀರಂಗಪಟ್ಟಣದ ದೇವಸ್ಥಾನದಲ್ಲಿ ಮದುವೆಯಾದೆವು. ನಮ್ಮ ಮದುವೆಗೆ ನಂದನಾ ಸಾಕ್ಷಿಯಾಗಿದ್ದಳು.

ಅದೇ ಸಂಜೆ...

ಕಾವೇರಿ ನದಿ ಅರಬ್ಬೀಸಮುದ್ರ ಸೇರುವ ಸುಂದರ ದೃಶ್ಯ ನೋಡುತ್ತಾ ಪರವಶನಾಗಿದ್ದೆ... ಶ್ರೀಮದ್ಗಾಂಭೀರ್ಯದಿಂದ ಶರಧಿಯ ತೆಕ್ಕೆಗೆ ಬೆರೆಯುತ್ತಿದ್ದ ಕಾವೇರಿ... ಒಡನೆ ಅನ್ನಿಸಿತು ಅದೆಷ್ಟು ಕನ್ನಿಕೆ, ಹೇಮಾವತಿಯರು ಸದ್ದಿಲ್ಲದೆ ಕಾವೇರಿಯೊಡನೆ ಶರಧಿಗೆ ಬೆರೆಯುತ್ತಾರೋ... ಯಾರೂ ಹೆಸರಾಗುವುದಿಲ್ಲ. ಕೇವಲ ಕಾವೇರಿ ಮಾತ್ರ...

ನನ್ನದು ಪ್ರೇಮ ವಿವಾಹ.


**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನವರು. ಕತೆ, ಕಾದಂಬರಿ, ಕವಿತೆ, ನಾಟಕ, ಪ್ರಬಂಧ ಪ್ರಕಾರಗಳಲ್ಲಿ ಬರೆದಿರುವ ಅವರು 15ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.